**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ಸಿ.ಸಿ. ಸಂಃ 293/2022**

| | | |
|---|---|---|
| ಸಾಕ್ಷಿಯ ಹೆಸರುಃ | ವೀಣಾ | ಫ್ರಾಸಾಃಃ 3 |
| ಗಂಡನ ಹೆಸರುಃ | ನಾಗೇಂದ್ರ | ಚಾಸಾಃಃ 3 |
| ವಯಸ್ಸುಃ | 54 ವರ್ಷ | ಪ್ರಮಾಣೀಕರಿಸಿದ<br>ದಿಃ 28/02/2024 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಅಂಬಲಾರೆ ಗ್ರಾಮ,<br>ಪಿರಿಯಾಪಟ್ಟಣ ತಾ. | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ</u>**

ನನಗೆ ಆರೋಪಿತರ ಪರಿಚಯವಿದೆ. ನನಗೆ ಫ್ರಾಸಾ-1, 2, ಚಾಸಾ-4 ರಿಂದ 9 ರವರ ಪರಿಚಯ ಇದೆ.

2. ಸುಮಾರು 2 ವರ್ಷಗಳ ಹಿಂದೆ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಾನು ಮನೆಯ ಬಾಗಿಲಿನ ಹತ್ತಿರ ನಿಂತಿದ್ದಾಗ, ಫ್ರಾಸಾ-2 ರವರು ಮನೆಯಿಂದ ಹೋಗುತ್ತಿದ್ದರು. ಆಗ 1 ಮತ್ತು 2 ನೇ ಆರೋಪಿತರು ನನ್ನ ಮಗನನ್ನು ಸೂಳೇ ಮಗನೇ ಕಳ್ಳ ನನ್ನ ಮಗನೇ ಎಂದು ಬೈಯುತ್ತಿದ್ದರು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ 1 ಮತ್ತು 2 ನೇ ಆರೋಪಿತರು ದೊಣ್ಣೆಯಿಂದ ಫ್ರಾಸಾ-2 ರವರ ಎಡಭುಜಕ್ಕೆ ಹೊಡೆದು ಕೆಳಗೆ ಬೀಳಿಸಿದರು. 3 ನೇ ಆರೋಪಿತರು 1 ಮತ್ತು 2 ನೇ ಆರೋಪಿತರಿಗೆ ಕುಮ್ಮಕ್ಕು ಕೊಟ್ಟು ಹೊಡೆಯಲು ಹೇಳಿದರು. ಅವರ ಕುಮ್ಮಕ್ಕಿನಂತೆ 1 ಮತ್ತು 2 ನೇ ಆರೋಪಿತರು ಫ್ರಾಸಾ-2 ರವರನ್ನು ಇನ್ನೂ ಹೊಡೆದರು. ಅವರು ಮಗನೇ ನೀನು ತಪ್ಪಿಸಿಕೊಂಡಿಲ್ಲ ಬಿಡು ಎಂದು ನುಡಿದರು. ಜನ ಬಂದ ತಕ್ಷಣ ಅವರು ದೊಣ್ಣೆಯನ್ನು ಎಸೆದು ಓಡಿ ಹೋದರು. ನಾನು,

ಪ್ರಾಸಾ-1 ಮತ್ತು ಹರೀಶ ಪ್ರಾಸಾ-2 ರವರನ್ನು ಬೆಟ್ಟದಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಂತರ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಆನಂತರ ನಾನು, ಪ್ರಾಸಾ-1 ಮತ್ತು ಹರೀಶ ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟೆವು. ಆ ದಿನ ಆರೋಪಿತರು ಬಳಸಿದ ದೊಣ್ಣೆ ಈ ದಿನ ನ್ಯಾಯಾಲಯದ ಮುಂದೆ ಇದೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

3. ದಿಃ 16/01/2022 ರಂದು ಬೆಳಿಗ್ಗೆ 9.40 ಗಂಟೆಯ ಸಮಯದಲ್ಲಿ ನಾನು ಮತ್ತು ನನ್ನ ಗಂಡನಾದ ನಾಗೇಶ ಇಬ್ಬರೂ ನಮ್ಮ ಮನೆಯ ಬಳಿ ನಿಂತಿರುವಾಗ ನಮ್ಮ ಮಗನಾದ ರಾಕೇಶನು ನಮ್ಮ ಊರಿನ ತಿಮ್ಮೇಗೌಡರ ಮಗನಾದ ಸ್ವಾಮಿಗೌಡರವರ ಮನೆಯ ಮುಂಭಾಗ ರಸ್ತೆಯಲ್ಲಿ ನಡೆದುಕೊಂಡು ನಮ್ಮ ಮನೆಗೆ ಬರುತ್ತಿದ್ದನು ಎಂದರೆ ಸರಿ. 3 ನೇ ಆರೋಪಿತ ಆತನಿಗೆ ಅದೇ ದೊಣ್ಣೆಯಿಂದ ಹೊಡೆಯಿರಿ ಅದೇನಾಗುತ್ತೋ ನಾನು ನೋಡಿಕೊಳ್ಳುತ್ತೇನೆಂದು 2 ನೇ ಆರೋಪಿತನಿಗೆ ಕುಮ್ಮಕ್ಕು ನೀಡಿದನು ಇದರಿಂದ ದುಷ್ಪ್ರೇರಣೆಗೊಂಡ 2 ನೇ ಆರೋಪಿತನು ಅದೇ ದೊಣ್ಣೆಯಿಂದ ಪ್ರಾಸಾ-2 ರವರ ಬಲಮುಂಗೈಗೆ, ಬಲಮಂಡಿಗೆ ಹೊಡೆದು ಗಾಯಪಡಿಸಿದರು ಎಂದರೆ ಸರಿ. ನಾನು ಮತ್ತು ಪ್ರಾಸಾ-1 ಜಗಳ ಬಿಡಿಸಲು ಹೋದಾಗ 2 ನೇ ಆರೋಪಿತ ನಮ್ಮಿಬ್ಬರಿಗೂ ಬಾಯಿಗೆ ಬಂದಂತೆ ಬೈದನು ಎಂದರೆ ಸರಿ. ನಾವು ಮತ್ತು ಚಾಸಾ-6 ಮತ್ತು 7 ರವರು ಜಗಳ ಬಿಡಿಸಿ ಸಮಾಧಾನ ಪಡಿಸಿದೆವು, ಆಗ 1 ಮತ್ತು 2 ನೇ ಆರೋಪಿತರು ಈ ದಿವಸ ಬಚಾವ್ ಆಗಿದ್ದೀಯಾ ಮುಂದೊಂದು ದಿವಸ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ಎಂದು ಕೊಲೆ

ಬೆದರಿಕೆ ಹಾಕಿದರು ಎಂದರೆ ಸರಿ. ಈ ವಿಚಾರವಾಗಿ ಫ್ರಾಸಾ–1 ರವರು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

4. ಚಾಸಾ–4 ನನ್ನ ಮಗನ ಸ್ನೇಹಿತ ಎಂದರೆ ಸರಿ. ಚಾಸಾ–5 ರಿಂದ 9 ರವರು ನಮ್ಮ ಸಂಬಂಧಿಕರು ಎಂದರೆ ಸರಿ. ಸ್ವಾಮಿಗೌಡ ಮತ್ತು ನನ್ನ ಮಗ ಜೊತೆಯಲ್ಲಿ ಮಾತನಾಡಿಕೊಂಡು ಬರುತ್ತಿದ್ದರು. ಸ್ವಾಮಿಗೌಡರ ತಂದೆಯ ಹೆಸರು ತಿಮ್ಮೇಗೌಡ. ಗಲಾಟೆ ಸಮಯದಲ್ಲಿ ಸ್ವಾಮಿಗೌಡರು ಸ್ಥಳದಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೆ ಜಗಳವಾಯಿತು. ಸಾಕ್ಷಿ ಮುಂದುವರೆದು ನನಗೂ ಸಹ ಆರೋಪಿತರು ಹೊಡೆದಿದ್ದರು ಎಂದು ನುಡಿಯುತ್ತಾರೆ. ಗಲಾಟೆ ಸಮಯಕ್ಕೆ ಚಾಸಾ–6 ಮತ್ತು 7 ರವರು ಎಷ್ಟು ದೂರದಲ್ಲಿ ಇದ್ದರು ಎಂದು ನನಗೆ ಜ್ಞಾಪಕವಿಲ್ಲ. ನಾನು ಬೆಳಿಗ್ಗೆ 10.00 ಗಂಟೆಗೆ ಬೆಟ್ಟದಪುರ ಆಸ್ಪತ್ರೆಗೆ ಹೋಗಿದ್ದೆ. ಯಾರ್ಯಾರು ಪಿರಿಯಾಪಟ್ಟಣ ಆಸ್ಪತ್ರೆಗೆ ಹೋಗಿದ್ದರು ಎಂದು ಜ್ಞಾಪಕ ಇಲ್ಲ. ಸಾಕ್ಷಿ ಮುಂದುವರೆದು ಪ್ರಸಾ–2 ರವರು ಇಬ್ಬರು ಸ್ನೇಹಿತರು ಹೋಗಿದ್ದರು ಎಂದು ನುಡಿಯುತ್ತಾರೆ. ಘಟನೆ ದಿನವೇ ನಾನು ನನ್ನ ಗಂಡನೊಂದಿಗೆ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ. 1 ಮತ್ತು 2 ನೇ ಆರೋಪಿತರು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿತರ ಮೇಲಿನ ದ್ವೇಷದಿಂದ ಅವರು ಹೊಡೆಯಲು ಕುಮ್ಮಕ್ಕು ನೀಡಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ಸಮಯಕ್ಕೆ 3 ನೇ ಆರೋಪಿತರು ಸ್ವಲ್ಪ ದೂರದಲ್ಲಿದ್ದರು. ಫ್ರಾಸಾ–2 ರವರನ್ನು ಕೆಳಗೆ ಬೀಳಿಸಿ 1 ಮತ್ತು 2 ನೇ ಆರೋಪಿತರು ದೊಣ್ಣೆಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ಪಕ್ಕದಲ್ಲೇ ಎಲ್ಲೋ ಬಿದ್ದಿತ್ತು ಅದನ್ನು ತಂದಿದ್ದರು. ಮು.ಮಾ.1 ಮನೆಯ ಹತ್ತಿರ ಬಿದ್ದಿತ್ತು. ಫ್ರಾಸಾ.1 ರವರು ಮು.ಮಾ.1 ನ್ನು ಪೊಲೀಸರಿಗೆ ನೀಡಿದ್ದರು. ಯಾವ ದಿನಾಂಕ, ತಿಂಗಳು

ಮತ್ತು ಇಸವಿ ಎಂದು ನೆನಪಿಲ್ಲ. ಮು.ಮಾ.1 ನ್ನು ಪೊಲೀಸರಿಗೆ ಮನೆಯ ಹತ್ತಿರ ಬಂದಾಗ ಕೊಟ್ಟಿದ್ದರು. ಆರೋಪಿತರಿಂದ ಪಡೆದ 25 ಸಾವಿರ ಹಣವನ್ನು ಮತ್ತೆ ಕೇಳಿದರು ಎಂದು ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಫ್ರಾಸಾ–1 ಮತ್ತು 2 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**